**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 808/2023**

**ದಿನಾಂಕಃ 08.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ದೇವರಾಜು | ಚಾಸಾ-2, ಪ್ರಾಸ.-1 |
| ತಂದೆಯ ಹೆಸರು ಃ | ಮಲ್ಲಿಕಾರ್ಜುನಪ್ಪ | |
| ವಯಸ್ಸು ಃ | 45 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಹಿರೇಗರ್ಜೆ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಆರೋಪಿ ನನಗೆ ಗೊತ್ತಿಲ್ಲ. ಮೃತ ಸಂಜು ನನಗೆ ಗೊತ್ತು. ಚಾಸಾ-1 ರವರು ನನಗೆ ಗೊತ್ತು. ಅಕ್ಟೋಬರ್ 2022 ರಂದು ಹಿರೇಗರ್ಜೆ ಯಿಂದ ಕಾಮನಕೆರೆಗೆ ಹೋಗಲು ಬಸ್ ನಿಲ್ದಾಣದ ಹತ್ತಿರ ನಿಂತಿರುವಾಗ ಸುಮಾರು 1.45 ರ ಸಮಯದಲ್ಲಿ ಶುದ್ದ ಗಂಗಾ ನೀರಿನ ಘಟಕದ ಹತ್ತಿರ ಆರೋಪಿಯು ಕಾಮನಕೆರೆ ಕಡೆಯಿಂದ ದ್ವಿ ಚಕ್ರ ವಾಹನದಲ್ಲಿ ಮತ್ತು ಕಡೂರು ಕಡೆಯಿಂದ ಮೃತ ವ್ಯಕ್ತಿಯು ಬೈಕಿನಲ್ಲಿ ಬರುತ್ತಿರುವಾಗ ಅಪಘಾತವಾಗಿರುತ್ತದೆ. ಅಪಘಾತವು ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಅಪಘಾತವಾದ ನಂತರ ನಾನು ಹೋಗಿ ನೋಡಿರುತ್ತೇನೆ. ಅಪಘಾತದಿಂದ ಮೃತ ವ್ಯಕ್ತಿಯು ಕೆಳಗೆ ಬಿದ್ದಿದ್ದು ಅವರ ತಲೆಗೆ ಗಾಯವಾಗಿತ್ತು ಮತ್ತು ಅವರ ಮೂಗಿನಿಂದ ಬಾಯಿಯಿಂದ ರಕ್ತ ಬರುತ್ತಿತ್ತು. ಆರೋಪಿಗೆ ಏನಾಯಿತು ಎಂದು ನಾನು ನೋಡಿರುವುದಿಲ್ಲ. ಆರೋಪಿಯ ಹೆಸರು ಮತ್ತು ವಿಳಾಸವನ್ನು ನಾನು ತಿಳಿದುಕೊಂಡಿರುವುದಿಲ್ಲ. ಚಾಸಾ-1 ರವರಿಗೆ ದೂರವಾಣಿ ಮೂಲಕ ಕರೆ ಮಾಡಿ ವಿಚಾರ ತಿಳಿಸಿರುತ್ತೇನೆ. ಸ್ಥಳೀಯರು ಸೇರಿಕೊಂಡು ಮೃತ ವ್ಯಕ್ತಿಯನ್ನು ಕಡೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತಾರೆ. ಮಾರ್ಗ ಮಧ್ಯೆದಲ್ಲಿ ಅಪಘಾತದಿಂದ ಗಾಯಗೊಂಡ ಸಂಜು ರವರು ಮೃತಪಟ್ಟಿರುತ್ತಾರೆ. ನಾನು ಆಸ್ಪತ್ರೆಗೆ ಹೋಗಿ ನೋಡಿರುತ್ತೇನೆ. ಮೃತ ವ್ಯಕ್ತಿಯು ಬೆಂಗಳೂರಿನಲ್ಲಿ 3 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಅಪಘಾತಕ್ಕೊಳಗಾದ ಮತ್ತು ಅಪಘಾತಪಡಿಸಿದ ಬೈಕ್ ನಂಬರುಗಳು ನನಗೆ ಗೊತ್ತಿಲ್ಲ. ಯಾರ ತಪ್ಪಿನಿಂದ ಅಪಘಾತವಾಯಿತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಅಪಘಾತವಾದ ಸಂಬಂಧ ದೂರು ದಾಖಲಾದ ವಿಚಾರ ನನಗೆ ನಂತರ ತಿಳಿದಿರುತ್ತದೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>**

ದಿಃ24.10.2022 ರಂದು ನಾನು ಸ್ವಂತ ಕೆಲಸಕ್ಕೆಂದು ಕಾಮನಕರೆಗೆ ಗ್ರಾಮಕ್ಕೆ ಹೋಗಿದ್ದು, ಊರಿಗೆ ವಾಪಸ್ಸು ಬರಲು ಕಾಮನಕೆರೆ ಬಸ್ ನಿಲ್ದಾಣದ ಹತ್ತಿರ ನಿಂತಿದ್ದಾಗ ಮದ್ಯಾಹ್ನ 1-45 ಗಂಟೆಗೆ ಕಾಮನಕೆರೆಗೆ ಗ್ರಾಮದ ಶುದ್ದ ಗಂಗಾ ಘಟಕದ ಮುಂದೆ ಟಾರು ರಸ್ತೆಯಲ್ಲಿ ಕಡೂರು ಕಡೆಯಿಂದ ಹಿರೇನಲ್ಲೂರು ಗ್ರಾಮದ ಕಡೆಗೆ ಹೋಗುತ್ತಿದ್ದ ಬೈಕಿಗೆ ಹಿರೇನಲ್ಲೂರು ಕಡೆಯಿಂದ ಬಂದ ಬೈಕಿನ ಸವಾರನು ಅತೀವೇಗ ಹಾಗೂ ಅಜಾಗರೂಕತೆಯಿಂದ ಅಪಘಾತ ಪಡಿಸಿದ್ದರು ಎಂದರೆ ಸಾಕ್ಷಿ ನಾನು ಅಪಘಾತವನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.  ಕೂಡಲೇ ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಎರಡೂ ಬೈಕಿನ ಸವಾರರು ಬೈಕ್ ಸಮೇತ ರಸ್ತೆ ಮೇಲೆ ಬಿದ್ದಿದ್ದು, ನಾನು ಇಬ್ಬರಿಗೂ ಉಪಚರಿಸಿರುತ್ತೇನೆ ಎಂದರೆ ಸರಿ. ನಂತರ ಬೈಕಿನ ನಂಬರನ್ನು ನೋಡಲಾಗಿ ಕೆಎ-66/ಎಲ್-895 ಬೈಕನ್ನು ಮೃತ ವ್ಯಕ್ತಿ ಚಲಾಯಿಸುತ್ತಿದ್ದರು ಎಂದರೆ ಗೊತ್ತಿಲ್ಲ. ಆರೋಪಿಯು ಚಲಾಯಿಸುತ್ತಿದ್ದ ಬೈಕ್ ನ ನಂ. ಕೆಎ-66/ಜೆ-3496 ಎಂದರೆ ನನಗೆ ಗೊತ್ತಿಲ್ಲ. ಸದರಿ ಬೈಕ್ ಚಾಲಕನ ಹೆಸರು ವಸಂತಕುಮಾರ್ ಎಂದು ನಂತರ ತಿಳಿಯಿತು ಎಂದರೆ ಸರಿ. ಅಪಘಾತವಾದ ವಿಚಾರವನ್ನು ನಾನು ಚಾಸಾ-1 ರವರಿಗೆ ನಾನು ತಿಳಿಸಿ ಆಸ್ಪತ್ರೆಗೆ ಹೋಗಿ ನೋಡಿದಾಗ ಸಂಜುರವರು ಮೃತಪಟ್ಟಿರುವುದು ತಿಳಿಯಿತು ಎಂದರೆ ಸರಿ.

ಮೃತ ಸಂಜುರವರು ಆ ದಿನ ಅತ್ತೆ ಮನೆಗೆ ಹೋಗಿ ಅಪಘಾತವಾಗಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ಆರೋಪಿಯ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಸಂಬಂಧ ನಾನು ದಿನಾಂಕಃ 24.10.2024 ರಂದು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗೆಳೆದಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಶ್ರೀ ಡಿ.ಕೆ. ಕೆ. ಆರೋಪಿ ಪರ ವಕೀಲರಿಂದಃ</u>**

ನಾನು ಮೃತ ವ್ಯಕ್ತಿ ಮತ್ತು ಚಾಸಾ-1 ರವರು ಒಂದೇ ಊರಿನವರು ಎಂದರೆ ಸರಿ. ನಾನು ನಿಂತಿದ್ದ ಸ್ಥಳ ಅಪಘಾತ ಸ್ಥಳಕ್ಕೆ ಸ್ವಲ್ಪ ದೂರ ಅಂತರ ಇತ್ತು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.